## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ, ತಿಪಟೂರು.

## ಸಿ.ಸಿ.ನಂ. 104/2018

<u>ಪಿರ್ಯಾದುದಾರರು</u> : ವಿರುದ್ಧ <u>ಆರೋಪಿತರು</u> :

ಮೆ..ಶ್ರೀ ಸಿದ್ದೇಶ್ವರ ಕೊಕನಟ್ ಇಂಡಸ್ಟ್ರೀಸ್,

1. ಎಂ.ಎಂ. ಗುಂಡ್ ವಿಲ್ ಕಂಪನಿ,

2.ಮೊಹ್ಮದ್ ಮನ್ಸೂರ್ .ಎಸ್.
ಪ್ರೊಪ್ರೈಟರ್,

### -: ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ಅಡಿಯಲ್ಲಿ ಆರೋಪಿತರ ಹೇಳಿಕೆ:-

ಪ್ರಶ್ನೆ:1) ಇದುವರೆವಿಗೂ ಪಿರ್ಯಾದುದಾರರ ಪರ ಸಾಕ್ಷ್ಯನುಡಿದ ಎಲ್ಲಾ ಸಾಕ್ಷೀದಾರರ ಹೇಳಿಕೆಗಳನ್ನು ಆಲಿಸಿದ್ದೀರಾ?

ಉತ್ತರ:-

ಪ್ರಶ್ನೆ:2) ಫ್ರಾ.ಸಾ-1 ಎಸ್.ಉಮೇಶ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 06.06.2017 ರಂದು ಆರೋಪಿತಯಾದ ನೀವು ಅವರಿಂದ ರೂ.4,00,000/- ಹಣವನ್ನು ಪಿರ್ಯಾದಿ ಸಂಸ್ಥೆಗೆ ಕೊಬ್ಬರಿ ಸರಬರಾಜು ಮಾಡುವುದಾಗಿ ಮುಂಗಡವಾಗಿ ಪಡೆದಿದ್ದು, ಅದರಂತೆ ಕೊಬ್ಬರಿ ಸರಬರಾಜು ಮಾಡದೇ ಇದ್ದ ಕಾರಣ ಸದರಿ ಮುಂಗಡ ಹಣವನ್ನು ತೀರುವಳಿ ಸಲುವಾಗಿ ಅವರಿಗೆ ತಿಪಟೂರು ಶಾಖೆಯ, ಕೆನರಾ ಬ್ಯಾಂಕಿನ ದಿಃ 13.11.2017 ರಂದು ಎರಡು ಚೆಕ್ ಗಳನ್ನು ನಂ.978088 ನ್ನು ರೂ.2,00,000/- ಗಳಿಗೆ ಹಾಗೂ ಚೆಕ್ ನಂ. 978089 ನ್ನು ರೂ.2,00,000/- ಗಳಿಗೆ ನಿಮ್ಮ ಸಹಿ ಮಾಡಿ ಪಿರ್ಯಾದಿ ಪರವಾಗಿ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:-

ಪ್ರಶ್ನೆ:3) ಫ್ರಾ.ಸಾ-1 ರವರು ಮುಂದುವರೆದು ನಂತರ ಅವರು ಸದರಿ ಚೆಕ್ ಗಳ ಪೈಕಿ ಚೆಕ್ ನಂ. 978088 ಒಂದನ್ನು ತಿಪಟೂರು ಶಾಖೆಯ ಐ.ಡಿ.ಬಿ.ಐ. ಬ್ಯಾಂಕಿಗೆ ನಗದೀಕರಣಕ್ಕಾಗಿ ಹಾಜರ್ ಪಡಿಸಿದಾಗ ಸದರಿ ಬ್ಯಾಂಕಿನವರು ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಲಭ್ಯವಿಲ್ಲ (Funds insufficient ) ಎಂದು ತಿಳಿಸಿ, ದಿಃ 14.11.2017 ರಂದು ಹಿಂಬರಹದೊಂದಿಗೆ ಸದರಿ ಚೆಕ್ ನ್ನು ಹಿಂದಿರುಗಿಸಿದ್ದು, ನಂತರ ಫ್ರಾ.ಸಾ-1 ರವರು ಆರೋಪಿಗಳಾದ ನಿಮಗೆ ಸಾಲದ ಹಣ ಮರುಪಾವತಿ ಮಾಡುವಂತೆ ತಿಳಿಸಿ ವಕೀಲರ ಮೂಲಕ ದಿಃ 24.11.2017 ರಂದು ಎರಡು ವಿಳಾಸಕ್ಕೂ ನೋಟೀಸ್ ಕಳುಹಿಸಿದ್ದು, ಸದರಿ ನೋಟೀಸ್ ದಿಃ 25.11.2017 ರಂದು ನಿಮಗೆ ಜಾರಿಯಾಗದೆ ಹಿಂದೆ ಬಂದಿರುತ್ತದೆ. ಆ ನಂತರವೂ ಸಹ ಆರೋಪಿಗಳಾದ ನೀವು ಪಿರ್ಯಾದುದಾರರಿಗೆ ಸಾಲದ ಹಣವನ್ನು ಮರುಪಾವತಿಸಿರುವುದಿಲ್ಲ ಹಾಗೂ ಅವರಿಗೆ ಮೋಸ ಮಾಡುವ ಸಲುವಾಗಿ ನೀವು ಸದರಿ ಚೆಕ್ ನ್ನು ವಿತರಿಸಿರುತ್ತೀರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ

ನೀವೇನು ಹೇಳುವಿರಿ?

ಉತ್ತರ:-

ಪ್ರಶ್ನೆ:4) ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ / ದಾಖಲಾತಿ ಹಾಜರು ಪಡಿಸುವಿರಾ?

ಉತ್ತರಃ-

ಪ್ರಶ್ನೆ:5) ಈ ಪ್ರಕರಣದಲ್ಲಿ ನೀವೇನಾದರೂ ಹೇಳ ಬಯಸುವಿರಾ?

ಉತ್ತರಃ-

(ದಿನಾಂಕ: **17.03.2021** ರಂದು ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿತರಿಗೆ ಓದಿ ಹೇಳಲಾಗಿ, ಅವರು ನೀಡಿದ ಉತ್ತರಗಳನ್ನು ಪಡೆದು ಯಥಾವತ್ತಾಗಿ ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು)

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,
ತಿಪಟೂರು